# ಸ್ವಾಮಿ ಪ್ರಭವಾನಂದ (೧೮೯೩ - ೧೯೭೬)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

**ಭಾಗ ೫**

**ಹಾ**ಲಿವುಡ್‌ನಲ್ಲಿ ನಾನು ಪ್ರತಿದಿನ ಬೆಳಗ್ಗೆ ೧೦.೩೦ರ ಹೊತ್ತಿಗೆ ಮಹಾರಾಜರನ್ನು ಕಾಣಲು ಹೋಗುತ್ತಿದ್ದೆ. ಅವರೊಡನೆ ಆಗ ನಾನಾ ವಿಷಯಗಳ ಕುರಿತು ಮಾತನಾಡುತ್ತಿದ್ದೆ. ಒಂದು ದಿನ ವೇದಾಂತದ 'ಅಧಿಕಾರವಾದ'ದ ಕುರಿತು ಮಾತನಾಡುತ್ತಿದ್ದಾಗ ಅವರೆಂದರು, ''ನೋಡು, ಉತ್ತಮ ವ್ಯಕ್ತಿಯನ್ನು ಉತ್ತಮನನ್ನಾಗಿ ಮಾಡುವುದರಲ್ಲಿ ಏನೂ ವಿಶೇಷತೆಯಿಲ್ಲ. ಕೆಟ್ಟವನನ್ನು ಒಳ್ಳೆಯವನನ್ನಾಗಿ ಮಾಡಬೇಕು! ಶುಕದೇವ ಮತ್ತು ನಾರದರು ನಿನ್ನ ಬಳಿ ವೇದಾಂತವನ್ನು ಕಲಿಯಲು ಬರುವುದಿಲ್ಲ, ತಿಳಿದುಕೊ. ಈ ಸಾಮಾನ್ಯ ಜನರು ಶಾಂತಿ–ಆನಂದಗಳನ್ನರಸುತ್ತ ನಮ್ಮ ಬಳಿ ಬರುತ್ತಾರೆ. ನಮ್ಮ ಆಧ್ಯಾತ್ಮಿಕ ಸಂಪತ್ತು, ಠಾಕೂರರು, ಶ್ರೀಮಾತೆ ಹಾಗೂ ಸ್ವಾಮೀಜಿಯವರು. ಅವರ ಉಪದೇಶಗಳನ್ನು ಇವರಿಗೆ ಕಲಿಸಿ ನೆರವಾಗುವುದೇ ನಮ್ಮ ಕೆಲಸ.''

೨೧.೦೬.೧೯೭೧ರಂದು ಸಾಂಟಾ ಬಾರ್ಬರಾದಲ್ಲಿ ಮಧ್ಯಾಹ್ನ ಭೋಜನದ ಸಮಯದಲ್ಲಿ ಹೇಳಿದರು, ''ಜಾರ್ಜ್ ಬರ್ನಾಡ್ ಷಾ, ಮಿಸ್ ಮ್ಯಾಕ್‌ಲೌಡ್‌ಗೆ ಪೋಸ್ಟ್‌ಕಾರ್ಡ್‌ನಲ್ಲಿ ಬರೆದಿದ್ದರು: 'ನನಗೂ ನಿನಗೂ ಈ ಪ್ರಪಂಚದಲ್ಲಿ ಜೀವಿಸುವ ಹಕ್ಕಿಲ್ಲ. ಕಾರಣ, ನಾವು ಭಯಾನಕವಾಗಿ ಕಾಣಿಸುತ್ತೇವೆ.' ''

ಮಹಾರಾಜರು ಹೊಸದೇನಾದರೂ ಹೇಳಿದರೆ, ನಾನು ನನ್ನ ಕೋಣೆಗೆ ಬಂದು ಅದನ್ನು ನನ್ನ ಡೈರಿಯಲ್ಲಿ ಬರೆದಿಡುತ್ತಿದ್ದೆ. ಅದರಿಂದ ಆಯ್ದ ಭಾಗಗಳಿವು:

### ೧೬.೨.೧೯೭೨, ಹಾಲಿವುಡ್, ಶ್ರೀರಾಮಕೃಷ್ಣ ಜಯಂತಿ

೧೯೧೪ನೆಯ ಇಸವಿಯಲ್ಲಿ ನಡೆದ ಘಟನೆ. ಅಂದು ಠಾಕೂರರ ಜನ್ಮದಿನ. ಪುಲಿನ್ ಮಿತ್ರ ಸ್ವಾಮೀಜಿಯವರ ಶಿಷ್ಯರು. ಅವರು ಸೊಗಸಾಗಿ ವೀಣೆ ನುಡಿಸುತ್ತಿದ್ದರು. ಅಂದು ಅವರ ವೀಣಾವಾದನ ಕೇಳುತ್ತ ರಾಜಾ ಮಹಾರಾಜರು ಅದರಲ್ಲಿ ತನ್ಮಯರಾದರು. ತಮ್ಮ ಭಾವಾವಸ್ಥೆಯಲ್ಲಿ, ಠಾಕೂರರ ಶರೀರಕ್ಕೆ ವೀಣೆಯು ತಗುಲುತ್ತಿರುವುದನ್ನು ಕಂಡ ಅವರು ಪುಲಿನ್ ಮಿತ್ರರಿಗೆ ಸ್ವಲ್ಪ ಸರಿದು ಕುಳಿತುಕೊಳ್ಳುವಂತೆ ಹೇಳಿದರು.

### ೧.೩.೧೯೭೨, ಹಾಲಿವುಡ್

ಬೇಲೂರು ಮಠದಲ್ಲಿ ಒಂದು ದಿನ ಮಹಾಪುರುಷ ಮಹಾರಾಜರು ತಮ್ಮ ಶಿಷ್ಯನು ಕೋಣೆಗೆ ಕಾಲಿರಿಸುತ್ತಲೇ ಅವನಿಗೆ ಪ್ರಣಾಮ ಮಾಡಲು ಮುಂದಾದರು.

**ಶಿಷ್ಯ :** ಮಹಾರಾಜ್, ಇದೇನು ಮಾಡುತ್ತಿರುವಿರಿ? ನಾನು ನಿಮ್ಮ ಶಿಷ್ಯ.

**ಮಹಾಪುರುಷ ಮಹಾರಾಜ್:** ಮೊದಲು ನನಗೆ ಭಗವಂತನು ಕಾಣಿಸುತ್ತಾನೆ. ಬಳಿಕ ನಾನು ವ್ಯಕ್ತಿಯನ್ನು ನೋಡುತ್ತೇನೆ.

### ೨೬.೪.೧೯೭೨, ಹಾಲಿವುಡ್

ಸತ್ಯೇನ್ ಮಹಾರಾಜ್ (ಸ್ವಾಮಿ ಆತ್ಮಬೋಧಾನಂದ) ಕಾಶಿಯಲ್ಲಿದ್ದಾಗ ಪ್ರತಿದಿನವೂ ಭಾಗವತ ಪಾರಾಯಣವನ್ನು ಮಾಡುತ್ತಿದ್ದರು. ಒಂದು ದಿನ ಯಾರೂ ಬಾರದಿದ್ದಾಗ ಅವರು ಪಾರಾಯಣ ನಿಲ್ಲಿಸಿದರು. ಅವರು ರಾಜಾ ಮಹಾರಾಜರ ಬಳಿ ಸಾರುತ್ತಲೇ ಮಹಾರಾಜರೆಂದರು, ''ಏನಪ್ಪ, ಭಾಗವತವನ್ನು ಓದುತ್ತಿರುವೆ ತಾನೆ?'' ''ಇಲ್ಲ ಮಹಾರಾಜ್,'' ''ಏಕೆ?'' ''ಯಾರೂ ಬರುತ್ತಿಲ್ಲ'' ''ಕೇಳಲೆಂದು ಬಂದಿದ್ದವರು, ನನ್ನ ಬಳಿ ಬಂದು, ಇಂದು ಭಾಗವತ ಪಾರಾಯಣ ನಡೆಯಲಿಲ್ಲ ಎಂದು ದೂರು ಹೇಳಿ ಹೋದರು.''

ಕಾಶಿಯಲ್ಲಿ ಸೂರ್ಯ ಮಹಾರಾಜರು, ರಾಜಾ ಮಹಾರಾಜರ ಸೇವಕರಾಗಿದ್ದರು. ಸಂಜೆ ಹೊತ್ತು ತಮ್ಮ ಬಳಿ ಯಾರೂ ಬರಬಾರದೆಂದು ರಾಜಾ ಮಹಾರಾಜರು ಹೇಳಿದ್ದರು. ಆದರೆ ಸೂರ್ಯ ಮಹಾರಾಜರು, ವೃದ್ಧರೊಬ್ಬರು ಮೆಟ್ಟಿಲು ಹತ್ತಿ ಮಹಾರಾಜರನ್ನು ಕಾಣಲು ಹೋಗುತ್ತಿದ್ದುದನ್ನು ಕಂಡರು. ಅವರು ಬೇಡವೆಂದರೂ ವೃದ್ಧರೂ ಅವರ ಮಾತಿಗೆ ಕಿವಿಗೊಡಲಿಲ್ಲ. ಸೂರ್ಯ ಮಹಾರಾಜರು ಅವರನ್ನು ಹಿಂಬಾಲಿಸಿ ಮಹಾರಾಜರ ಕೋಣೆಯ ಬಾಗಿಲನ್ನು ನೂಕಿ ಒಳಗೆ ನೋಡಿದಾಗ ಅವರಿಗೆ ಅಲ್ಲಿ ಯಾರೂ ಕಾಣಿಸಲಿಲ್ಲ. ಮಹಾರಾಜರು ಸೂರ್ಯ ಮಹಾರಾಜರು ಒಳಗೆ ಬಂದ ಕಾರಣವನ್ನು ಕೇಳಿದಾಗ ಅವರು ಆ ವೃದ್ಧರ ಬಗ್ಗೆ ಹೇಳಿದರು. ಆಗ ರಾಜಾ ಮಹಾರಾಜರು, ''ನೀನು ಅವರನ್ನು ನೋಡಿದೆಯಲ್ಲ, ಈಗ ಹೋಗು'' ಎಂದರು. ( ಆ ವೃದ್ಧರೇ ಶ್ರೀರಾಮಕೃಷ್ಣರು.)

ಕಂಖಲ್‌ನಲ್ಲಿ ಒಂದು ಸಲ ಏರ್ಪಡಿಸಲಾಗಿದ್ದ ಸಾಧುಗಳ ಔತಣ(ಭಂಡಾರ)ಕ್ಕೆ ಅನ್ಯ ಸಂಪ್ರದಾಯದ ಅನೇಕ ಸಾಧುಗಳನ್ನು ಆಮಂತ್ರಿಸಲಾಗಿತ್ತು. ರಾಜಾ ಮಹಾರಾಜರಿಗಾಗಿ ಒಂದು ಕುರ್ಚಿಯನ್ನು ನಿಗದಿಗೊಳಿಸಲಾಗಿತ್ತು. ಬೇರೆ ಸಂಪ್ರದಾಯದ ಸಾಧುಗಳೊಬ್ಬರು ಅದರಲ್ಲಿ ಕುಳಿತುಕೊಳ್ಳಲು ಹೋದಾಗ ನಾನು

ಅವರನ್ನು ತಡೆದೆ. ಅವರು ನಕ್ಕು ಸುಮ್ಮನಾದರು. ನಂತರ ಊಟದ ವೇಳೆ ರಾಜಾ ಮಹಾರಾಜರಿಗೆ ಬೇರೆಯ ಆಸನವನ್ನು ನೀಡಿದಾಗ ಅವರೆಂದರು, ''ಬೇಡ, ನಾನು ಎಲ್ಲರೊಡನೆ, ಅವ ರಂತೆಯೆ ಕುಳಿತುಕೊಳ್ಳುವೆ. ಇಲ್ಲಿ ಇಂದು ನಾಲ್ಕು ಮಂದಿ ಬ್ರಹ್ಮ ಜ್ಞಾನಿಗಳು ಬಂದಿರುವರು.'' ಊಟವಾದ ಬಳಿಕ ನೋಡುತ್ತೇನೆ, ನಾನು ಕುರ್ಚಿಯಲ್ಲಿ ಕುಳಿತುಕೊಳ್ಳಲು ನಿಷೇಧಿಸಿದ್ದ ಸ್ವಾಮಿಗಳು ಮಹಾರಾಜರ ಬಲಗಡೆಯಲ್ಲಿ ಕುಳಿತು ಅವರೊಂದಿಗೆ ಮಾತ ನಾಡುತ್ತಿದ್ದಾರೆ, ಇಬ್ಬರೂ ನಗುತ್ತಿದ್ದಾರೆ!

ಬೇಲೂರು ಮಠದಲ್ಲಿ ಒಮ್ಮೆ ಅಮೆರಿಕನ್ನರೊಬ್ಬರು ರಾಜಾ ಮಹಾರಾಜರನ್ನು ಭೇಟಿಯಾಗಲು ಬಂದಿದ್ದರು. ಮಿಸ್ ಮ್ಯಾಕ್ಲೌಡ್ ಹಾಗು ಶರತ್ ಮಹಾರಾಜರು ಬಹುಬಾರಿ ವಿನಂತಿಸಿ ಕೊಂಡರೂ ಮಹಾರಾಜರು ಅವರನ್ನು ಭೇಟಿಯಾಗಲಿಲ್ಲ. ನಂತರ ಆ ಭಕ್ತರು ನೌಕೆಯಲ್ಲಿ ದಕ್ಷಿಣೇಶ್ವರಕ್ಕೆ ಹೋಗಿ ಸಾಯಂ ಕಾಲ ಹಿಂದಿರುಗಿದರು. ನೌಕೆಯಿಂದಲೆ, ಮಹಾರಾಜರು ಗಂಗಾ ಘಾಟಿನಲ್ಲಿ ನಿಂತಿರುವುದನ್ನು ನೋಡಿದ ಅವರು ವಿಹ್ವಲರಾಗಿ ಅಲ್ಲೇ ಬಿದ್ದು ಪ್ರಾಣವನ್ನು ಕಳೆದುಕೊಂಡರು.

ಬ್ರಿಟಿಷರು ಆಡಳಿತದ ಆ ಕಾಲದಲ್ಲಿ ಯಾವುದೆ ವಿದೇಶೀ ಯರು ಬೇಲೂರು ಮಠದಲ್ಲಿ ಮೃತರಾದರೆ ತೊಂದರೆಯಾಗು ತ್ತದೆಂದು ಬಹುಶಃ ಮಹಾರಾಜರು ಅವರನ್ನು ಭೇಟಿಯಾಗಿರ ಲಿಲ್ಲ.

ಯೋಗಿನ್ ಮಾ ನಿರ್ವಿಕಲ್ಪ ಸಮಾಧಿಯನ್ನು ಪಡೆದಿದ್ದರು. ಕೊನೆಯಲ್ಲಿ ಅವರಿಗೆ ತಮ್ಮ ಮೊಮ್ಮಕ್ಕಳ ಮೇಲೆ ಅತೀವ ಆಸಕ್ತಿ ಯುಂಟಾಗಿತ್ತು. ''ಆಕೆಯ ಪ್ರಾರಬ್ಧಗಳು ಕಳೆಯುತ್ತಿವೆ'' ಎಂದು ಸ್ವಾಮೀಜಿ ಹೇಳಿದ್ದರಂತೆ.

ಈ ಕೆಳಗಿನ ಘಟನೆಯನ್ನು ಕಣ್ಣಾರೆ ಕಂಡಿದ್ದ ಸ್ವಾಮಿ ಶುದ್ಧಾ ನಂದರು ನನಗೆ ಹೇಳಿದ್ದರು: ''ಒಂದು ದಿನ ಸ್ವಾಮೀಜಿ ಸಾಯಂ ಕಾಲದಿಂದಲೇ ಶಿಷ್ಯಂದಿರಿಗೆ ಪಾಣಿನಿಯ ವ್ಯಾಕರಣವನ್ನು ಕಲಿಸುತ್ತಿದ್ದರು. ಸಂಜೆಯ ಮುನ್ನ ಬಾಬುರಾಮ ಮಹಾರಾಜರು ಬಂದು, 'ಆರತಿಯ ಸಮಯವಾಯಿತು, ಎಲ್ಲರೂ ಬನ್ನಿ' ಎಂದಾಗ ಸ್ವಾಮೀಜಿ ಬಾಬುರಾಮ ಮಹಾರಾಜರನ್ನು ಬಯ್ಯುತ್ತ 'ಕೇವಲ ಮಂದಿರದಲ್ಲಿ ಗಂಟೆ ಬಾರಿಸುತ್ತ ದೀಪವನ್ನು ತಿರುಗಿಸು ವುದೇ ಆರತಿಯೇನು? ಇದು ಆರತಿಯಲ್ಲವೆ?' ಎಂದರು. ಬಾಬುರಾಮ ಮಹಾರಾಜರು ಮರುಮಾತನಾಡದೆ ಒಬ್ಬರೇ ಆರತಿ ಬೆಳಗಿದರು. ನಂತರ ಸ್ವಾಮೀಜಿ ಮಂದಿರಕ್ಕೆ ಹೋಗಿ 'ಠಾಕೂರ್, ನನ್ನನ್ನು ಕ್ಷಮಿಸಿ, ನನ್ನನ್ನು ಕ್ಷಮಿಸಿ' ಎನ್ನುತ್ತ ಠಾಕೂರರ ಶ್ವೇತಗಲ್ಲಿನ ವೇದಿಕೆಯ ಮೇಲೆ ತಮ್ಮ ತಲೆಯನ್ನು ಹೊಡೆದುಕೊಳ್ಳತೊಡಗಿದರು. ಅವರ ಹಣೆಯಲ್ಲಿ ರಕ್ತ ಹೆಪ್ಪು ಗಟ್ಟಿತು.''

ಒಂದು ದಿನ ರಾಜಾ ಮಹಾರಾಜರು ಹೇಳಿದರು, ''ನಮ್ಮ ಸಂಘ ಜೀವನವು ಪ್ರೀತಿ-ಪ್ರೇಮಗಳ ಮೇಲೆ ಪ್ರತಿಷ್ಠಿತವಾಗಿದೆ ಯಲ್ಲದೆ ನಿಯಮಗಳ ಸಂಕೋಲೆಗಳ ಮೇಲಲ್ಲ.'' ಒಂದು ದಿನ ಸ್ವಾಮಿ ಧೀರಾನಂದರು ಮಹಾರಾಜರಿಗೆ ಹೇಳಿದ್ದರು, ''ಮಹಾ ರಾಜ್, ಈ ನೂತನ ಸಾಧುಗಳಿಗಾಗಿ ಕೆಲವು ನಿಯಮಗಳಿರ ಬೇಕು.'' ''ಸ್ವಾಮೀಜಿ ಈಗಾಗಲೇ ನಿಯಮಗಳನ್ನು ಹಾಕಿ ದ್ದಾರೆ.'' ''ಹೌದು ಮಹಾರಾಜ್, ಆದರೆ ನಮಗೆ ಇನ್ನೂ ಕೆಲವು ನಿಯಮಗಳ ಆವಶ್ಯಕತೆಯಿದೆ.'' ಆಗ ಮಹಾರಾಜರೆಂದರು, ''ಕೃಷ್ಣಲಾಲ್, ನಿಯಮಗಳನ್ನು ಹೆಚ್ಚಿಸದೆ ಹೃದಯವಂತಿಕೆ, ಪ್ರೀತಿಗಳನ್ನು ಹೆಚ್ಚಿಸು.''

ಸ್ವಾಮಿ ಶರ್ವಾನಂದರು ಮದ್ರಾಸಿನಲ್ಲಿ ಒಂದು ದಿನ ಮಹಾ ರಾಜರನ್ನು ಕೇಳಿದರು, ''ಮಹಾರಾಜ್, ಕರ್ಮಕ್ಷೇತ್ರದಲ್ಲಿದ್ದಾಗ ನಮ್ಮ ಸಾಧುಗಳ ನಡುವೆ ಇಷ್ಟೊಂದು ವೈಮನಸ್ಸೇಕೆ?'' ಮಹಾ ರಾಜರು ತಕ್ಷಣವೆ ಉತ್ತರಿಸಿದರು, ''ಠಾಕೂರರನ್ನು ನೀವು ಪ್ರೀತಿಸದಿರುವುದೇ ಕಾರಣ.''

ಒಂದು ದಿನ ರಾಜಾ ಮಹಾರಾಜರು ಊಟ ಮಾಡು ತ್ತಿದ್ದಾಗ, ಸೇವಕರು ಅವರನ್ನು ಸುತ್ತುವರಿದು ಕುಳಿತಿದ್ದರು. ಆಗ ಕಾಳಿ ಮಹಾರಾಜರು (ಸ್ವಾಮಿ ಅಭೇದಾನಂದರು) ಹೇಳಿದರು, ''ರಾಜಾ, ನೀನು ಇವೆಲ್ಲ ಏನು ಪ್ರಾರಂಭಿಸಿರುವೆ? ಇವರೆಲ್ಲ ನಿನ್ನನ್ನು ದೇವತಾಮೂರ್ತಿಯನ್ನಾಗಿ ಮಾಡಿಬಿಡುತ್ತಾರೆ.'' ನಗುತ್ತ ಮಹಾರಾಜರು ಉತ್ತರಿಸಿದರು, ''ನೋಡು ಕಾಳಿ, ಇವರಿಗೆ ನನ್ನ ಮೇಲೇನೂ ಪ್ರೀತಿಯಿಲ್ಲ; (ಊಟದ ಬಟ್ಟಲು ಗಳನ್ನು ತೋರುತ್ತ) ತಿನಿಸುಗಳ ಲೋಭದಿಂದ ಇವರೆಲ್ಲ ನನ್ನನ್ನು ಸುತ್ತುವರಿಯುತ್ತಾರೆ. ನನಗೆ ಹೆಚ್ಚು ತಿನ್ನಲಾಗುವುದಿಲ್ಲ.'' ಕಾಳಿ ಮಹಾರಾಜರು, ''ಇದೆಲ್ಲ ನಿನ್ನ ಮೋಜು-ಕುಚೇಷ್ಟೆ ಅಷ್ಟೆ'' ಎಂದರು. ಮಹಾರಾಜರು: ''ನೋಡು ಕಾಳಿ ಭಾಯಿ, ಇವರೆಲ್ಲ ನನ್ನನ್ನು ಪ್ರೀತಿಸುವುದಕ್ಕಿಂತಲೂ ಹೆಚ್ಚಾಗಿ ಹರಿಭಾಯಿಯನ್ನು ಪ್ರೀತಿಸುತ್ತಾರೆ. ತ್ಯಾಗ-ವೈರಾಗ್ಯಗಳ ಬಗ್ಗೆ ಬಿಸಿ-ಬಿಸಿಯಾಗಿ ಉಪದೇಶ ಕೊಡು, ನಿನ್ನ ಬಳಿಗೂ ಬರುತ್ತಾರೆ!''

ಒಂದು ದಿನ ಮಹಾರಾಜ್ ಹಾಗೂ ಬಾಬುರಾಮ ಮಹಾ ರಾಜರು ಬೇಲೂರು ಮಠದಲ್ಲಿ ಕುಳಿತಿದ್ದಾರೆ. ಬಾಬುರಾಮ ಮಹಾರಾಜರೆಂದರು, ''ಸ್ವಾಮೀಜಿ ಪತಿತಪಾವನರು.'' ರಾಜಾ ಮಹಾರಾಜರೆಂದರು, ''ನಾನೂ ಪತಿತಪಾವನನೇ.''

ಬೋಶಿ ಸೇನ್ ಸೋದರ ಟಾಬುರನ್ನು ಶ್ರೀಮಾತೆಯವರೂ, ಮಹಾರಾಜರು ಬಹಳ ಪ್ರೀತಿಸುತ್ತಿದ್ದರು. ಒಮ್ಮೆ ನಿಂದನೀಯ ಕಾರ್ಯವನ್ನು ಮಾಡಿದ ಅವರು ಲಜ್ಜೆಯಿಂದ ಮುಖಮುಚ್ಚಿ ಕೊಳ್ಳುವಂತಾಗಿ, ರಾಜಾ ಮಹಾರಾಜರ ಕಣ್ಣಿಗೆ ಬೀಳದಂತೆ ತಪ್ಪಿಸಿಕೊಳ್ಳತೊಡಗಿದರು. ಒಂದು ಮಧ್ಯಾಹ್ನ ಬಲರಾಮ ಮಂದಿರ ದಲ್ಲಿ ಯಾರನ್ನೋ ಭೇಟಿಯಾಗಲು ಹೋದಾಗ, ವರಾಂಡಾದಲ್ಲಿ

ಮಹಾರಾಜರು ಎದುರಾದರು. ಮಹಾರಾಜರು, ''ಟಾಬು, ನೀನು ದೊಡ್ಡ ಕೊಂಬಿನ ಕೋಣವನ್ನು ನೋಡಿದ್ದೀಯಾ?'' ಎಂದು ಕೇಳಿದರು. ''ಹ್ಞುಂ ಮಹಾರಾಜ್.'' ''ಕೋಣನ ಕೊಂಬಿನ ಮೇಲೆ ತುಂಬ ಸೊಳ್ಳೆಗಳು ಕುಳಿತರೆ, ಕೋಣಕ್ಕೆ ತಿಳಿಯುತ್ತದೇನು?'' ಟಾಬು ಸುಮ್ಮನಿದ್ದರು. ಮಹಾರಾಜರು ಮುಂದುವರಿಸಿದರು, ''ನಾನು ಆ ಕೋಣದಂತೆ.'' ಅಂದರೆ, ನಿನ್ನ ಆ ಸಾಮಾನ್ಯ ತಪ್ಪನ್ನು ನಾನು ಗಣನೆಗೆ ತೆಗೆದುಕೊಳ್ಳುವುದಿಲ್ಲ ಎಂದು ಮಹಾರಾಜರು ಹೇಳಬಯಸಿದ್ದರು.

**೧೫.೩.೧೯೭೮, ಹಾಲಿವುಡ್**

ಸ್ವಾಮಿ ಬ್ರಹ್ಮಾನಂದರು ಸಂಗ್ರಹಿಸಿದ 'ಶ್ರೀರಾಮಕೃಷ್ಣರ ಉಪದೇಶ'ಗಳ ಬಗ್ಗೆ ಸ್ವಾಮಿ ಪ್ರಭವಾನಂದರು ಹೇಳಿದರು, ''ಶುದ್ಧಾನಂದರಿಗೆ ಮಹಾರಾಜರು ಹೇಳಿದರು: 'ಠಾಕೂರರು ಹೇಳುತ್ತಾರೆ, ನಾನು ಬರೆಯುತ್ತೇನೆ. ಠಾಕೂರರು ಎರಡು ಉಪದೇಶಗಳನ್ನು ಪ್ರಕಾಶಪಡಿಸಬಾರದೆಂದು ಹೇಳಿದ್ದಾರೆ. ಆದರೆ ಶರತ್‌ನ ಪುಸ್ತಕದಲ್ಲಿ (ಸ್ವಾಮಿ ಶಾರದಾನಂದರ 'ಲೀಲಾ ಪ್ರಸಂಗ'ದಲ್ಲಿ) ಒಂದನ್ನು ಈಗಾಗಲೆ ಪ್ರಕಟಿಸಲಾಗಿದೆ – ಅದೇನೆಂದರೆ, – 'ಕಾಶಿಯಲ್ಲಿ ಮರಣ ಹೊಂದಿದರೆ ಮುಕ್ತಿ' ಎಂಬುದು. ಮತ್ತೊಂದನ್ನು ಮಹಾರಾಜರು ಹೇಳಲೇ ಇಲ್ಲ.''

**೬.೫.೧೯೭೬, ಹಾಲಿವುಡ್**

ಮ್ಯಾಕ್ಸ್ ಮುಲ್ಲರ್ ಠಾಕೂರರ ಜೀವನ ಚರಿತ್ರೆಯನ್ನು ಬರೆದಾಗ ಪ್ರತಾಪ ಚಂದ್ರ ಮಜುಂದಾರರು ಅವರನ್ನು ಭೇಟಿಯಾಗಿ ಹೇಳಿದರು, ''ರಾಮಕೃಷ್ಣರು ಒಳ್ಳೆಯವರಾಗಿದ್ದರು. ಆದರೆ ಕೊನೆಯಲ್ಲಿ ಅವರು ವೇಶ್ಯೆಯರು ಹಾಗೂ ಕುಡುಕರೊಂದಿಗೆ ಒಡನಾಡಿದರು.'' ಇದನ್ನು ಕೇಳಿದ ಮ್ಯಾಕ್ಸ್ ಮುಲರ್ ಆನಂದಭರಿತರಾಗಿ ಕುರ್ಚಿಯಿಂದೆದ್ದು ಹೇಳಿದರು, ''ಅವರು ಅವತಾರವೆಂಬುದಕ್ಕೆ ಇದೇ ಪ್ರಮಾಣ. ಏಸುಕ್ರಿಸ್ತನೂ ಇದೇ ರೀತಿಯ ಪತಿತೋದ್ಧಾರಕನಾಗಿದ್ದನು.''

**೨೫.೬.೧೯೭೬, ಹಾಲಿವುಡ್**

ವಿಜ್ಞಾನ ಮಹಾರಾಜರು ಈ ಘಟನೆಯನ್ನು ವಿಷ್ಣುಪುರದಲ್ಲಿ ಹೇಳಿದ್ದರು: ಠಾಕೂರರು ಒಂದು ದಿನ ತಮ್ಮ ಸಂನ್ಯಾಸಿ ಶಿಷ್ಯರುಗಳನ್ನೆಲ್ಲ ಕರೆದು, ''ನಾನು ಮಧ್ಯದಲ್ಲಿ ಕುಳಿತುಕೊಳ್ಳುವೆ. ನೀವೆಲ್ಲ ನನ್ನ ಸುತ್ತಲೂ ಕುಳಿತುಕೊಳ್ಳಿರಿ. ಶ್ರೀಕೃಷ್ಣನ ರಾಸಲೀಲೆಯನ್ನು ಧ್ಯಾನಿಸಿ'' ಎಂದರು. ಅವರು ಆ ದಿನ ಎಲ್ಲರಿಗೂ ರಾಸಲೀಲೆಯ ಆಸ್ವಾದನೆಯನ್ನು ಮಾಡಿಸಿದರು.

ಪ್ರೇಮಾನಂದರನ್ನು ಕುರಿತು ರಾಜಾ ಮಹಾರಾಜರು ಹೇಳಿದರು – ''ಅವರು ಹೇಳುವ ಒಂದೆರಡು ವಿಷಯಗಳನ್ನು ಶ್ರದ್ಧೆಯಿಂದ ಪಾಲಿಸಿದರೆ ನಿಮ್ಮ ಜೀವನ ಸಾರ್ಥಕವಾಗುವುದು. ಅವರೆಲ್ಲ ಸಾಮಾನ್ಯ ವ್ಯಕ್ತಿಗಳೆಂದು ತಿಳಿದಿರಾ? ಅವರು ಯಾವ ದಿಕ್ಕಿಗೆ ಕಣ್ಣು ಹಾಯಿಸುವರೋ, ಆ ದಿಕ್ಕೇ ಪವಿತ್ರವಾಗುವುದು.''

ಕಾಶೀಪುರದಲ್ಲಿ ಠಾಕೂರರು ತಮ್ಮದೇ ಚಿತ್ರವನ್ನು ಪೂಜಿಸಿದ್ದರು. ಗೋಡೆಯಲ್ಲಿ ಒಂದು ಚಿತ್ರವನ್ನು ತೂಗಿ ಹಾಕಲಾಗಿತ್ತು. ಅವರು ಇದನ್ನು ತಂದುಕೊಡಲು ಮಹಾರಾಜರಿಗೆ ಹೇಳಿ, ತೋಟದಿಂದ ಕೆಲವು ಹೂಗಳನ್ನು ತರಲು ನಿರ್ದೇಶಿಸಿದರು. ಬಳಿಕ ಹೂವುಗಳಿಂದ ಪಟವನ್ನು ಪೂಜಿಸಿ ತಮ್ಮ ಹಣೆಗೆ ಒತ್ತಿಕೊಳ್ಳುತ್ತ, ''ನೋಡುತ್ತಿರಿ, ಈ ಚಿತ್ರವನ್ನು ಮುಂದೆ ಮನೆ-ಮನೆಯಲ್ಲೂ ಪೂಜಿಸುವರು'' ಎಂದರು.

**೪.೭.೧೯೭೬, ಹಾಲಿವುಡ್**

ಒಂದು ತಿಂಗಳಿನಿಂದ ಸ್ವಾಮಿ ಪ್ರಭವಾನಂದರ ಆರೋಗ್ಯ ಕೆಟ್ಟಿದೆ. ನಾನು ಮತ್ತು ಕ್ರಿಸ್ಟೋಫರ್ ಇಷರ್‌ವುಡ್ ಹಾಲಿವುಡ್ ಮತ್ತು ಸಾಂಟಾ ಬಾರ್ಬರಾಗಳಲ್ಲಿ ಉಪನ್ಯಾಸಗಳನ್ನು ನೀಡುತ್ತಿದ್ದೆವು. ಜುಲೈ ೩ನೆಯ ತಾರೀಕು ಬೆಳಗ್ಗೆ ಮಂದಿರದಲ್ಲಿ ಜಪ, ಧ್ಯಾನಗಳನ್ನು ಮುಗಿಸಿ ಕೋಣೆಗೆ ಹಿಂದಿರುಗುತ್ತಿದ್ದಾಗ, ಕೃಷ್ಣಲಾಲ್ ಹಾಗು ನರ್ಸ್ ಮಹಾರಾಜರನ್ನು ಹಿಡಿದುಕೊಂಡು ಮಂದಿರದ ಪ್ರದಕ್ಷಿಣೆ ಮಾಡಿಸುತ್ತಿದ್ದುದನ್ನು ಕಂಡೆ. ನನ್ನನ್ನು ನೋಡಿ ಮಹಾರಾಜರು ಮುಗುಳ್ನಕ್ಕರು. ನಂತರ ತಮ್ಮ ಕೋಣೆಗೆ ಹಿಂದಿರುಗಿದರು. ಅಂದು ಅವರಿಗೆ ಪ್ರಬಲವಾದ ಹೃದಯಾಘಾತವುಂಟಾಯಿತು. ಅವರು ದಿನವೆಲ್ಲ ಬೆವರುತ್ತಿದ್ದರು. ಆಸ್ಪತ್ರೆಗೆ ಹೋಗಲು ಅವರು ಒಪ್ಪಲಿಲ್ಲ. ದಿನವಿಡೀ 'ಮಾ' (ಶ್ರೀಮಾತೆ) ಮತ್ತು 'ಮಹಾರಾಜ'ರನ್ನು (ಸ್ವಾಮಿ ಬ್ರಹ್ಮಾನಂದರನ್ನು) ಮಾತ್ರವೇ ಕರೆಯುತ್ತಿದ್ದರು. ನಾನು ಅವರ ಕೋಣೆಗೆ ಅನೇಕ ಸಲ ಹೋದೆ. ಬೇಲೂರು ಮಠಕ್ಕೆ ಸಮಾಚಾರ ತಲುಪಿಸಿದೆ. ರಾತ್ರಿ ೧೧ ಗಂಟೆಯ ಹೊತ್ತಿಗೆ ನನಗವರು, ''ನೀನು ಕೋಣೆಗೆ ಹೋಗಿ ಮಲಗು'' ಎಂದರು. ಅವರ ಕೋಣೆಯಲ್ಲಿ ಕೃಷ್ಣಾನಂದ, ಅಭಯಾ ಹಾಗು ಇನ್ನಿಬ್ಬರು ನರ್ಸ್ ಇದ್ದರು. ನಾನು ರಾತ್ರಿ ೧೨ರ ಹೊತ್ತಿಗೆಹೋಗಿ ನೋಡಿದಾಗ ಮಹಾರಾಜರ ಕಡೆಗಾಲ ಬಂದಂತಿತ್ತು. ೧೨.೫ಕ್ಕೆ, ಅಂದರೆ ಜುಲೈ ೪ರಂದು ಮಹಾರಾಜರು ತಮ್ಮ ಇಹಶರೀರವನ್ನು ತ್ಯಜಿಸಿದರು. ನಾವು ಸಾಧು-ಸನ್ಯಾಸಿನಿಯರೆಲ್ಲ 'ಹರಿ ಓಂ ರಾಮಕೃಷ್ಣ' ಎಂದು ಪಠಿಸತೊಡಗಿದೆವು. ಖ್ಯಾತ ಸಾಧುಗಳೊಬ್ಬರು ನಮ್ಮೆದುರು ಹೊರಟುಹೋದರು.

ನಂತರ ಅಮೆರಿಕದ ಸುಮಾರು ಎಲ್ಲ ಭಾರತೀಯ ಸಾಧುಗಳೂ ಅವರ ಸಂಸ್ಮರಣ ಕಾರ್ಯಕ್ರಮಕ್ಕೆ ಬಂದಿದ್ದರು. 'ಶರೀರವು ಭಸ್ಮವಾದ ಬಳಿಕ ಮಾತ್ರವೇ ಸಾಧುವಿನ ಗುಣಗಾನ ಮಾಡಬಹುದು' ಎನ್ನುತ್ತಾರೆ. ಪ್ರಭವಾನಂದರು ಅಂತಹ ಓರ್ವ ಗುಣವಂತ ಸಾಧುಗಳಾಗಿದ್ದರು. *(ಸಮಾಪ್ತಿ)*